ದೊಡ್ಡದೊಡ್ಡ ಕುಳಗಳಿಗೆ. ಅವರೇ ಈ ಹುರಿದುಂಬಿಸುವ ಕೆಲಸ ಮಾಡುವುದು. ಸೇನೆಗಳ ಹಿರಿಯ ಅಧಿಕಾರಿಗಳಿಗೆ, ಮಂತ್ರಿಗಳಿಗೆ ಕಮಿಶನ್ ದೊರಕುತ್ತದೆ. ಅಲ್ಲಿಂದ ಇಲ್ಲಿಗೆ ಗುಂಡು ಹಾರಿಸಿ ಸ್ಟಾಕು ಖಾಲಿ ಮಾಡುವುದು. ಹೊಸತಾಗಿ ಮದ್ದುಗುಂಡು ಖರೀದಿಸುವುದಕ್ಕೆ ದಾರಿ ಮಾಡಿಕೊಡುವುದು. ಖರೀದಿಸುವಾಗ ಅದರಲ್ಲಿ ಕಮಿಶನ್ ಹೊಡಿಯುವುದು. ಒಬ್ಬರು ಯುದ್ಧ ವಿಮಾನ ಖರೀದಿಸುವುದು ಇನ್ನೊಬ್ಬರು ಹೊಡೆದುರುಳಿಸುವುದು. ಶಸ್ತ್ರಾಸ್ತ್ರ ಸರಬರಾಜು ಮಾಡುವ ದೇಶಗಳೇ ಸಾಲವನ್ನೂ ಕೊಡುತ್ತಾರೆ. ನಮ್ಮಲ್ಲಿ ರಸ್ತೆ ರಿಪೇರಿಗೆ ಹಣ ಇಲ್ಲ. ಶಾಲೆ ದುರುಸ್ತಿಗೆ ಹಣ ಇಲ್ಲ. ಆಸ್ಪತ್ರೆ ಕಟ್ಟಿ ಎಂದರೆ ಹಣ ಇಲ್ಲ. ಆದರೆ, ನಮಗೆ ಮಿಲಿಟರಿ ಬೇಕು. ಟ್ಯಾಂಕರ್ ಬೇಕು. ಫೈಟರ್ ಜೆಟ್‌ಗಳು ಬೇಕು. ನಿಮ್ಮಲ್ಲೂ ಹಾಗೆಯೇ ಅಲ್ವಾ?'' ಅಂದ.

''ನನಗೆ ಇವುಗಳ ಬಗ್ಗೆ ಹೆಚ್ಚು ವಿವರಗಳು ಗೊತ್ತಿಲ್ಲ. ಕೇಳಿಕೊಂಡು ಹೋಗಿಲ್ಲ'' ನುಣುಚಿಕೊಂಡೆ ನಾನು.

''ಇಂಡಸ್ಟ್ರಿಯಲ್ ಏರಿಯಾ ಹದಿಮೂರು ಬರುವ ವರೆಗೆ ನಾವು ಹೀಗೆ ಮಾತನಾಡಬಹುದು. ಏನು ಪ್ರಯೋಜನ? ಅಲ್ಲಿ ಸಾಯುವವರು ಸಾಯ್ತಾರೆ. ಹಣ ಮಾಡುವವರು ಮಾಡ್ತಾರೆ. ಮಿಲಿಟರಿಯಲ್ಲಿ ಸತ್ತವರನ್ನು ದೇಶಸೇವೆಯಲ್ಲಿ ವೀರಮರಣ ಹೊಂದಿದ ಎಂದು ಹೊಗಳುತ್ತಾರೆ.

